ರಾಜ್ಯದಲ್ಲಿರುವ ಲಂಬಾಣಿ ಜನಾಂಗದ ಬಗ್ಗೆ

೧೯೩೧. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಲಂಬಾಣಿ ಜನಾಂಗದ ಜನಸಂಖ್ಯೆ ಎಷ್ಟು ?

ಆ) ಲಂಬಾಣಿ ಜನಾಂಗಕ್ಕೆ ಈವರೆಗೆ ಯಾವ ಸೌಲಭ್ಯ ಒದಗಿಸಿ ಕೊಡಲಾಗಿದೆ ?

ಇ) ಅತಿ ಹಿಂದುಳಿದ ಲಂಬಾಣಿ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಸರ್ಕಾರದವರೇನಾದರೂ ಇಚ್ಛಿಸುವರೆ ?

ಈ) ರಾಜ್ಯದಲ್ಲಿರುವ ಲಂಬಾಣಿಗರ ಸಮಸ್ಯೆಯನ್ನು ಅರಿಯಲು ಹಾಗೂ ಬಗೆಹರಿಸಲು ಒಂದು ಆಯೋಗವನ್ನು ಸರ್ಕಾರದವರು ನೇಮಿಸುವರೆ ?

ಉ) ಬೆಂಗಳೂರು ನಗರ ಹಾಗೂ ಇನ್ನಿತರ ಪಟ್ಟಣಗಳಲ್ಲಿ ಲಂಬಾಣಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಸರ್ಕಾರದವರು ಉದ್ದೇಶಿಸಿರುವರೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ೧೯೭೧ನೇ ಸಾಲಿನ ಜನಗಣತಿಯ ಪ್ರಕಾರ ರಾಜ್ಯದ ಲಂಬಾಣಿ ಜನಾಂಗದ ಜನಸಂಖ್ಯೆ– ೧,೮೫,೦೨೭

ಆ) ಲಂಬಾಣಿ ಜನಾಂಗವು ಪರಿಶಿಷ್ಟ ಜಾತಿಯಾಗಿದ್ದು, ಪರಿಶಿಷ್ಟ ಜಾತಿಯವರಿಗೆ ನೀಡಲಾಗುತ್ತಿರುವ ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿದ್ದಾರೆ.

ಇ) ಇಲ್ಲ.

ಈ) ಇಲ್ಲ.

ಉ) ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳಲ್ಲಿ ಲಂಬಾಣಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸಿ ಮಂದಿರಗಳು

೧೭೫೯. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಆಡಳಿತದಲ್ಲಿದ್ದ ಪ್ರವಾಸಿ ಮಂದಿರಗಳನ್ನು ಯಾವಾಗ ಲೋಕೋಪಯೋಗಿ ಇಲಾಖೆ ತೆಗೆದುಕೊಳ್ಳಲಾಗುವುದು.

ಆ) ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಂತಹ ಪ್ರವಾಸಿ ಮಂದಿರಗಳ ಒಟ್ಟು ಸಂಖ್ಯೆ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಆಗತ್ಯ ಬಿದ್ದಾಗ ಹಣದ ಲಭ್ಯತೆಗೆ ಅನುಗುಣವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಬೇಕಾಗುತ್ತದೆ.

ಆ) ೨೪ ಪ್ರವಾಸಿ ಮಂದಿರಗಳು ಈಗ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ವಶವಿದೆ.

ಕರ್ನಾಟಕ ರಾಜ್ಯದಲ್ಲಿ ಭಿಕ್ಷುಕರ ಸ್ಥಿತಿ ಸುಧಾರಿಸುವ ಬಗ್ಗೆ

೧೫೦೩. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಿಕ್ಷುಕರ ಸ್ಥಿತಿ ಸುಧಾರಿಸಲು ಸರ್ಕಾರದವರು ಯಾಕೆ ಕೊಂಡಿರುವ ಕಾರ್ಯಕ್ರಮಗಳು ಯಾವುವು ?

ಆ) ರಾಜ್ಯದಲ್ಲಿರುವ ಒಟ್ಟು ಭಿಕ್ಷುಕರ ಸಂಖ್ಯೆ ಎಷ್ಟು ?

ಇ) ರಾಜ್ಯದಲ್ಲಿ ಭಿಕ್ಷುಕರೇ ಇಲ್ಲದಂತೆ ಮಾಡಲು ಯೋಜನೆಯನ್ನೇನಾದರೂ ರೂಪಿಸಲಾಗಿದೆಯೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).--

ಅ) ಕರ್ನಾಟಕ ಭಿಕ್ಷಾಟನ ನಿರ್ಮೂಲನಾ ಕಾಯಿದೆ ೧೯೭೫ರ ರೀತ್ಯ ಭಿಕ್ಷುಕರನ್ನು ಹಿಡಿದು ಅವರನ್ನು ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಸುಮಾರು ಆರು ತಿಂಗಳಿಂದ ಒಂದು ವರ್ಷದವರೆಗೆ ಇರಿಸಲಾಗುವುದು. ಈ ಸಮಯದಲ್ಲಿ ಅವರಿಗೆ ಉಚಿತವಾಗಿ ಊಟ, ವಸತಿ, ಬಟ್ಟೆ, ಔಷಧಿ ಇತ್ಯಾದಿಗಳನ್ನು ಕೊಡಲಾಗುವುದು.

ಭಿಕ್ಷೆಯಿಂದ ಜೀವಿಸುವವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಪ್ರಯತ್ನಿಸಲಾಗುತ್ತಿದೆ. ಆರೋಗ್ಯವಂತರಾದ ಭಿಕ್ಷುಕರನ್ನು ವ್ಯವಸಾಯದಲ್ಲಿಯೂ ತರಕಾರಿ ಬೆಳೆಯುವುದರಲ್ಲಿಯೂ, ಕೇಂದ್ರಗಳ ಜಮೀನುಯಿರುವಲ್ಲಿ ಕೆಲಸಕ್ಕೆ ತೊಡಗಿಸಲಾಗುವುದು. ಇದೂ ಅಲ್ಲದೆ ಇನ್ನೂ ಕೆಲವರನ್ನು ಅವರವರ ಇಚ್ಛಾನುಸಾರ ಹೊಲಿಗೆ ತರಬೇತಿಯಲ್ಲಿ, ಬಡಗಿತನ ಕಮ್ಮಾರತನ, ಬಟ್ಟೆನೇಯುವಿಕೆ, ಬೆತ್ತದ ಕೆಲಸ, ಹಗ್ಗ ನೇಯುವಿಕೆ, ಊದಿನಕಡ್ಡಿ ತಯಾರಿಸುವಿಕೆಯಲ್ಲಿಯೂ ತರಬೇತಿ ಕೊಡಲಾಗುವುದು. ಈ ಎಲ್ಲ ಕೆಲಸಗಳಿಗೆ ಸೇರಿದವರಿಗೆ ೨ ರೂಪಾಯಿ ದಿನಕೂಲಿ ಕೊಟ್ಟು ಅವರು ಬಿಡುಗಡೆಯಾಗುವಾಗ, ಅವರವರು ಒಟ್ಟು ಗಳಿಸಿದ ಹಣವನ್ನು ಅವರಿಗೆ ವಾಪಸ್ಸು ಕೊಟ್ಟು ಕಳುಹಿಸಲಾಗುವುದು.

ಆ) ಈ ಮಾಹಿತಿಯು ದೊರಕುವುದಿಲ್ಲ.

೧೯೮೪-೮೫ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು ೪೧೬೭ ಮಂದಿ ಭಿಕ್ಷುಕರನ್ನು ಹಿಡಿಯಲಾಗಿದೆ.

ಇ) ಕಡುಬಡತನವೇ ಭಿಕ್ಷಾಟನೆಗೆ ಕಾರಣ. ಆದರೂ ಭಿಕ್ಷಾಟನೆಯನ್ನು ನಿರ್ಮೂಲ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ಕುಂದಾಪುರ ಕ್ಷೇತ್ರದ ಬಸ್ರೂರು ಹೊಳೆಗೆ ಸೇತುವೆ ನಿರ್ಮಿಸುವುದು.

೧೪೯೫. ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).- ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಬಸ್ರೂರು ಗ್ರಾಮದ ಬಸ್ರೂರು ಹೊಳೆಗೆ ಬಸ್ರೂರಿನಿಂದ ಹಟ್ಟಿಕುದ್ರುವರೆಗೆ ಸೇತುವೆ ನಿರ್ಮಿಸುವ ಯೋಜನೆ ಸರಕಾರದವರ ಮುಂದಿದೆಯೆ.

ಆ) ಹಾಗಿದ್ದಲ್ಲಿ, ಇದರ ಅವಶ್ಯಕತೆ ಸರಕಾರ ಮನಗಂಡಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಹಣದ ಲಭ್ಯತೆಗೆ ಅನುಗುಣವಾಗಿ ಮತ್ತು ಆದ್ಯತೆಯ ಮೇರೆಗೆ ಈ ಕೆಲಸವನ್ನು ಮುಂಬರುವ ವರ್ಷಗಳಲ್ಲಿ ತೆಗೆದುಕೊಳ್ಳಲು ಪರ್ಯಾಲೋಚಿಸಲಾಗುವುದು.

ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು.

೧೪೯೫. ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಇ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ಎಷ್ಟು (ಜಿಲ್ಲಾವಾರು ವಿವರಗಳನ್ನೊದಗಿಸುವುದು)